# ದಾರಿಯಾವುದಯ್ಯಾ ವೈಕುಂಠಕೆ ದಾರಿ ತೋರಿಸಯ್ಯಾ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** The wordings mainly are as per the book in Ref. 1 above. The wordings in the book in Ref. 2 above and that of the singer are matching and are marked in yellow highlights. The differences marked in asterik (*) marks which are as per the book Ref. 1 above.

ರಾಗ: ಕಲ್ಯಾಣಿ ತಾಳ: ಅಟ

ದಾರಿ ಯಾವುದಯ್ಯಾ ವೈಕುಂಠಕೆ ದಾರಿ ತೋರಿಸಯ್ಯಾ || ಪ ||

ದಾರಿ ಯಾವುದಯ್ಯ ದಾರಿ ತೋರಿಸಯ್ಯ
ಆಧಾರ ಮೂರುತಿ ನಿನ್ನ ಪಾದ ಸೇರುವುದಕ್ಕೆ || ಅಪ ||

ಅನುಭವದನುಭವದಿ ಕತ್ತಲೆಯೊಳು
ಬಲು ಅಂಜುತೆ ನಡುಗಿ
ಬಳಲುತ್ತ ತಿರುಗಿದೆ (ಹಾದಿಯ) (ದಾರಿಯ*) ಕಾಣದೆ
(ಹೊಳೆವಂಥ) (ಹೊಳೆಯುವ*) ದಾರಿಯ ತೋರೋ ನಾರಾಯಣ || 1 ||

ಪಾಪವ ಪೂರ್ವದಲಿ ಮಾಡಿದುದಕೆ
ಲೇಪವಾಗಿರೆ ಕರ್ಮ
ಈ ಪರಿಯಿಂದಲಿ ನಿನ್ನ ನೆನೆಸಿಕೊಂಬೆ
ಶ್ರೀಪತಿ ಸಲಹೆನ್ನ ಭೂಪ ನಾರಾಯಣ || 2 ||

ಇನ್ನು ನಾ ಜನಿಸಲಾರೆ ಭೂಮಿಯ ಮೇಲೆ
ನಿನ್ನ ದಾಸನಾದೆನೋ

ಪನ್ನಗಶಯನ ಶ್ರೀ ಪುರಂದರ ವಿಠಲ
ಇನ್ನು ಪುಟ್ಟಿಸದಿರೊ ಎನ್ನ ನಾರಾಯಣ     || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

(ಹರಿದಾಸದೀಕ್ಷೆಯೇ ವೈಕುಂಠಕ್ಕೆ ದಾರಿ, ಗುರು ಕಾರುಣ್ಯದಿಂದ ಹರಿಯ ಒಲುಮೆ ದೊರೆತು ಸಂಸಾರವನ್ನು ದಾಟಿ ಮುಕ್ತಿಯನ್ನು ಪಡೆಯುವುದೇ ವೈಕುಂಠ. ದೀಕ್ಷೆಯನ್ನು ಪಡೆದುಕೊಂಡ ಮೇಲೆ ಮಾಡಬೇಕಾದ ಸಾಧನೆಗಳತ್ತ ದಾಸರು ಇಲ್ಲಿ ಗಮನಹರಿಸಿದ್ದಾರೆ.)

**ವೈಕುಂಠಕೆ** – ಈ ಸಂಪ್ರದಾಯದಲ್ಲಿ ವೈಕುಂಠವೆಂಬುದು ನಾರಾಯಣನ (ವಿಕುಂಠನ) ನಿತ್ಯ ನಿವಾಸ ಸ್ಥಾನ. ವೈಕುಂಠವೆಂಬುದು ಅಪ್ರಾಕೃತ ಲೋಕ, 'ದಿವ್ಯ, ನಿತ್ಯ, ಸನಾತನ, ಗುಣತ್ರಯ ವಿವರ್ಜಿತ' (ಪಾಂಚರಾತ್ರಾಗಮ). ಭೂಮಿಯಿಂದ ಅಂತರಿಕ್ಷ, ಸ್ವರ್ಗ, ಮಹರ್ಲೋಕ, ಜನೋಲೋಕ, ತಪೋಲೋಕ, ಸತ್ಯಲೋಕಗಳನ್ನು ಮೀರಿರುವ ಈ ಎಡೆಯಲ್ಲಿ ವಾಸಿಸುವ ಮುಕ್ತರಿಗೆ ಜ್ಞಾನ, ಭಕ್ತಿ, ವಿರಕ್ತ ಇವು ಮೂರು ಎಣೆಯಿಲ್ಲದೆ, ಕೊರತೆಯಿಲ್ಲದೆ ಇರುತ್ತವೆ. ಜೀವರು ಸ್ವ ಸ್ವರೂಪದಿಂದ ಈ ಲೋಕವನ್ನು ಹೊಂದಿ ಅಲ್ಲಿ ಹರಿಯ ಸಾನ್ನಿಧ್ಯದಿಂದ ಅಲೌಕಿಕವಾದ, ನಿರವಧಿಕವಾದ ಸುಖವನ್ನು ಪಡೆಯುವರು. ಅವರಿಗೆ ಭ್ರಾಂತಿ, ಅಜ್ಞಾನ ಮೊದಲಾದ ದೋಷಗಳು ಸ್ವಲ್ಪವೂ ಇರುವುದಿಲ್ಲ. 'ಪಂಚಾಶತ್ ಕೋಟಿ ಬ್ರಹ್ಮಾಂಡ ಖರ್ಪರಕ್ಕೆ ಹತ್ತಿರುವ ಈ ಲೋಕವೇ' ಎಲ್ಲ ಲೋಕಗಳ ಸಂಪತ್ತಿಗೆ ಆಧಾರವಾದುದು. ನೋಡಿ ವಾದಿರಾಜ ಸ್ವಾಮಿಗಳ 'ವೈಕುಂಠ ವರ್ಣನೆ.'

**ಹೊಳೆವಂಥ ದಾರಿ** – ಅರ್ಚಿರಾದಿ ಮಾರ್ಗ. ಮರ್ತ್ಯರು ಭವದಿಂದ ಉತ್ತರೋತ್ತರ ಸಾಗುವ ದಾರಿಗಳು ಎರಡು – ಹೊಗೆಯಂತೆ ಕಪ್ಪಿಟ್ಟ ದಾರಿ (ಧೂಮಾದಿ ಮಾರ್ಗ), ಇಲ್ಲಿ ಮಾಡಿದ ಶುಭಾಶುಭ ಕರ್ಮಗಳಿಂದ ಪಿತೃ ಲೋಕಕ್ಕೆ ಒಯ್ಯುವುದು; ಸೂರ್ಯನ ಕಿರಣದಂತೆ ಹೊಳೆಯುವ ದಾರಿ (ಅರ್ಚಿರಾದಿ ಮಾರ್ಗ). ಶುಭ ಕರ್ಮಗಳಿಂದ ಮತ್ತು ಜ್ಞಾನದಿಂದ ದೇವ ಲೋಕಗಳಿಗೆ ಸಾಗಿ ಕಡೆಯಲ್ಲಿ ಮುಕ್ತಿಯನ್ನು ಕಾಣಿಸುವ ದಾರಿ. ಮೊದಲನೆಯದನ್ನು ಪಿತೃ ಯಾನವೆಂದೂ ಎರಡನೆಯದನ್ನು ದೇವ ಯಾನವೆಂದೂ ಕರೆಯುವ ವಾಡಿಕೆಯಿದೆ.

**Classification:** Keerthane
**Ankita:** sri purandara vittala
**Location:** NA
**Category:** jeevana darshana,
**Group Words:** Narayana, vaikunta, bhumi, dari, sripati, pannaga, karma,

**Pravachana:** NA